ಊರಿನ ತ್ಯಾಜ್ಯ, ಹೂಳೇ ಹೆಚ್ಚು. ಬಹುತೇಕ ಕೆರೆಗಳು ವಸತಿ ತಾಣ, ಸ್ಟೇಡಿಯಂ, ಮನರಂಜನಾ ಕೇಂದ್ರ, ಬಸ್ ನಿಲ್ದಾಣಗಳಾಗಿ ಬದಲಾಗಿವೆ. ಸ್ಥಳೀಯ ನೀರಿನ ಮೂಲಗಳನ್ನು ಒಣಗಿಸಿ ನೂರಾರು ಮೈಲಿ ದೂರದಿಂದ ನೀರು ತರುವ ಯೋಜನೆಗಳನ್ನು ರೂಪಿಸಲಾಗುತ್ತಿದೆ. ನಾಲೆ, ಕೊಳವೆ ಹಾದು ಬರುವ ದಾರಿಯುದ್ದಕ್ಕೂ ಪರಿಸರದ ಮಾರಣಹೋಮ ನಡೆಯುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ಅದು ಅನಿವಾರ್ಯ ಎನ್ನುವವರೂ ಇದ್ದಾರೆ.

ನಗರಗಳ ಉಷ್ಣಾಂಶ ದಿನೇ ದಿನೇ ಹೆಚ್ಚುತ್ತಿದೆ. ಕಟ್ಟಲಾಗಿರುವ ಮನೆ ವಾಣಿಜ್ಯಿಕ ಕಟ್ಟಡಗಳು ಒತ್ತೊತ್ತಾಗಿರುವುದರಿಂದ ಗಾಳಿಯಾಡಲೂ ಜಾಗವಿಲ್ಲ. ಸೂರ್ಯನ ಬಿಸಿಲು ಹೆಚ್ಚಿರುವ ನಮ್ಮ ದೇಶದ ಮನೆಗಳಲ್ಲಿ ಹಿಂದೆಲ್ಲ ಕಿಟಕಿ–ಬಾಗಿಲುಗಳ ಮೇಲೆ ಸಜ್ಜ ಕಟ್ಟಿರುತ್ತಿದ್ದರು. ಈಗ ಸಜ್ಜ ಮಾಯವಾಗಿ ಸೂರ್ಯನ ಬಿಸಿಕಿರಣ ನೇರ ಮನೆಯೊಳಗೇ ಪ್ರವೇಶಿಸುವುದರಿಂದ ಒಳಾಂಗಣದ ಉಷ್ಣತೆ ಹೆಚ್ಚುತ್ತದೆ. ಈ ಉಷ್ಣತೆಯನ್ನು ಕಡಿಮೆಗೊಳಿಸಲು ಫ್ಯಾನು, ಏರ್‌ಕಂಡೀಶನರ್‌ಗಳ ಬಳಕೆ ಹೆಚ್ಚುತ್ತಿದೆ. ಅದಕ್ಕಾಗಿ ಹೆಚ್ಚಿನ ವಿದ್ಯುತ್ ಬೇಕಾಗುತ್ತದೆ. ಏರ್‌ಕಂಡೀಶನರ್‌ಗಳಿಂದ ಹೊಮ್ಮುವ ಕ್ಲೋರೊಫ್ಲೋರೊಕಾರ್ಬನ್ ಓಝೋನ್ ಪದರಕ್ಕೆ ಧಕ್ಕೆ ತಂದು ವಾತಾವರಣದ ಉಷ್ಣಾಂಶ ಹೆಚ್ಚಿಸುತ್ತಿದೆ. ಬೇಸಿಗೆಯ ಈ ದಿನಗಳಲ್ಲಿ ಮಹಾನಗರಗಳಲ್ಲಿ ಅತಿ ಹೆಚ್ಚು ಮಾರಾಟಗೊಳ್ಳುತ್ತಿರುವ ಎಲೆಕ್ಟ್ರಾನಿಕ್ ವಸ್ತುಗಳಲ್ಲಿ ಹವಾನಿಯಂತ್ರಕ ಯಂತ್ರ ಅಗ್ರ ಸ್ಥಾನದಲ್ಲಿದೆ. ಸಿಎಫ್‌ಸಿ ಹೊಮ್ಮಿಸುವ ರೆಫ್ರಿಜರೇಟರ್‌ಗಳ ಮಾರಾಟವೂ ಜೋರಾಗಿದೆ.

ನಗರಗಳ ಮಾಲಿನ್ಯ ಪಕ್ಕದ ಊರು, ಗ್ರಾಮಗಳಿಗೆ ವರ್ಗಾವಣೆಗೊಂಡು ಅಲ್ಲಿನ ಬೆಳೆ ಕುಂಠಿತಗೊಳ್ಳುತ್ತಿದೆ. ವಾರ್ಷಿಕ ಹತ್ತುಕೋಟಿ ಜನರ ಆಹಾರ ಉತ್ಪಾದನೆ ಕಡಿಮೆಯಾಗಿದೆ ಎಂಬ ಮಾಹಿತಿ ಇದೆ. ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯಿರುವ ನಗರಗಳಲ್ಲಿ ನೀರು–ಗಾಳಿ ಕಲುಷಿತಗೊಂಡಿದೆ. ಈಗ ವಿಶ್ವದ ನಗರವಾಸಿಗಳ ಜನಸಂಖ್ಯೆ 420 ಕೋಟಿ. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿಯ 11ನೇ ಗುರಿ 'ಸುಸ್ಥಿರ ನಗರ'ಗಳ ಅನಿವಾರ್ಯತೆಯನ್ನು ಒತ್ತಿ ಹೇಳುತ್ತದೆ. ಬೇಕಾದ ಮುಕ್ತತೆ ಮತ್ತು ವಿಪುಲ ಉದ್ಯೋಗಾವಕಾಶಗಳಿಗಾಗಿ ಹೆಚ್ಚಿನ ಜನ ನಗರಗಳಿಗೆ ಬರುತ್ತಾರೆ. ಇವರ ವಸತಿಗಾಗಿ ನಗರ ವಿಸ್ತಾರಗೊಳ್ಳುತ್ತಲೇ ಹೋಗುತ್ತದೆ. ನಗರದ ಹೊರವಲಯದಲ್ಲಿದ್ದುಕೊಂಡು ಪ್ರತಿನಿತ್ಯ ನಗರಗಳಿಗೆ ಕೆಲಸಕ್ಕೆ ಬರುವ ಬಹುಸಂಖ್ಯೆಯ ಜನರಿಂದ ಜನ–ವಾಹನ ದಟ್ಟಣೆ ಸೃಷ್ಟಿಯಾಗುತ್ತಿದೆ. ಮನೆಯಿಂದ ಕೆಲಸದ ಜಾಗಕ್ಕೆ ತಲುಪಲು ಬೇಕಾಗುವ ಸಮಯ ಸರಾಸರಿ ಮುಕ್ಕಾಲು ಗಂಟೆಯಷ್ಟಾಗಿದೆ. ಸಮರ್ಪಕ ರಸ್ತೆಗಳ ಕೊರತೆಯಿಂದ ಸಾರ್ವಜನಿಕ ವಾಹನ ವ್ಯವಸ್ಥೆ ಬೇಕಾದಷ್ಟು ಇಲ್ಲ. ಆಗ ಸ್ವಂತ ವಾಹನಗಳು ಉರಿಸುವ ಡೀಸೆಲ್–ಪೆಟ್ರೋಲ್‌ಗಳಿಂದ ವಾತಾವರಣದ ಬಿಸಿ ಏರುತ್ತದೆ.

ನಮ್ಮ ನಗರಗಳು ಆರ್ಥಿಕತೆಯ ಶಕ್ತಿ ತಾಣಗಳು. ದೇಶದ ಒಟ್ಟು ಉತ್ಪನ್ನದ 80 ಭಾಗ ನಗರಗಳಿಂದಲೇ ಬರುತ್ತದೆ. ಜಗತ್ತಿನಲ್ಲಿ ಉತ್ಪಾದನೆಯಾಗುತ್ತಿರುವ ಶಕ್ತಿಯ 3ನೇ ಎರಡು ಭಾಗವನ್ನು ನಗರಗಳೇ ಬಳಸುತ್ತಿವೆ. ಇದರಿಂದಾಗಿ ವಿಶ್ವದ ಇಂಗಾಲ ಹೊರ ಸೂಸುವಿಕೆಯಲ್ಲಿ ನಗರಗಳ ಪಾಲು ಶೇ. 75ರಷ್ಟಿದೆ. ಕೇವಲ 25 ನಗರಗಳು ಇಡೀ ವಿಶ್ವ ಹೊಮ್ಮಿಸುವ ಶಾಖವರ್ಧಕಗಳ ಪಾಲಿನ ಅರ್ಧದಷ್ಟನ್ನು ಹೊಮ್ಮಿಸುತ್ತಿವೆ. ಇವು ನಗರಗಳ ಮಾಲಿನ್ಯ ಹೆಚ್ಚಿಸುವುದರ ಜೊತೆಗೆ ವಿಶ್ವದ ವಾಯುಗುಣದ ಮೇಲೂ ನಕಾರಾತ್ಮಕ ಪ್ರಭಾವ ಬೀರುತ್ತಿವೆ. ವಾತಾವರಣ ಬಿಕ್ಕಟ್ಟು ಎದುರಿಸಲಿರುವ ವಿಶ್ವದ 100 ನಗರಗಳ ಪೈಕಿ 43 ನಮ್ಮಲ್ಲೇ ಇವೆ.

ನಮಗೆ ಬೇಕಿರುವುದು ಸ್ಮಾರ್ಟ್ ಸಿಟಿಗಳಲ್ಲ. ಬೀಳುವ ಮಳೆಯ ಪ್ರತಿ ಹನಿಯನ್ನೂ ಸಂಗ್ರಹಿಸಿ, ಶುದ್ಧೀಕರಿಸಿ ಮರು ಬಳಕೆ ಮಾಡುವ, ಮನೆಯಿಂದ ಹೊಮ್ಮುವ ತ್ಯಾಜ್ಯ ನೀರು–ಕಸವನ್ನು ಸಂಸ್ಕರಿಸುವ, ಬಿಸಿಲನ್ನು ಶಕ್ತಿಯನ್ನಾಗಿ ಬಳಸುವ, ಸಾರ್ವಜನಿಕ ವಾಹನ ವ್ಯವಸ್ಥೆಗೆ ಒತ್ತು ನೀಡುವ ಸುಸ್ಥಿರ ನಗರಗಳು ನಮಗೆ ಬೇಕು. ಬೆಂಗಳೂರಿನಲ್ಲಿ ಹೆಸರಿಗೆ ಮಾತ್ರ 2 ಲಕ್ಷ ಕಟ್ಟಡಗಳಲ್ಲಿ ಮಳೆ ನೀರು ಕೊಯಿಲಿನ ವ್ಯವಸ್ಥೆ ಇದೆ. ವಾಹನ ದಟ್ಟಣೆ ತಡೆಯಲು ಹೊಸ ರಸ್ತೆ ನಿರ್ಮಿಸುವುದರ ಬದಲಿಗೆ ಸಾರ್ವಜನಿಕ ವಾಹನ ವ್ಯವಸ್ಥೆ ಸುಧಾರಿಸಬೇಕು. ನೂರು ದಿನಗಳ ಉದ್ಯೋಗ ಮತ್ತು ಆದಾಯದ ಖಾತ್ರಿ ನೀಡುವ ನರೇಗಾ ಯೋಜನೆ ಜನ ನಗರಗಳಿಗೆ ವಲಸೆ ಬರುವುದನ್ನು ಕಡಿಮೆ ಮಾಡಿದೆ. ಇದು ಇನ್ನಷ್ಟು ಬಲಗೊಳ್ಳಬೇಕು. ಅವರಿರುವಲ್ಲಿಯೇ ದುಡಿಯಲು ಅವಕಾಶ ಹೆಚ್ಚಬೇಕು.

## ಶೋಲಾ-ಸಾಗರಗಳನ್ನೂ ಬಿಡದ ಮಾಲಿನ್ಯ

ನಿಮಗೆಲ್ಲ ನೆನಪಿರಬಹುದು. ಜಗತ್ತಿನ ಅತಿ ದೊಡ್ಡ ಥರ್ಮಾಮೀಟರ್ ಕಾರ್ಖಾನೆ



ವಾಯುಮಾಲಿನ್ಯದಿಂದ ಮಸುಕಾಗುತ್ತಿರುವ ದೆಹಲಿ ಮಹಾನಗರದ ಚಿತ್ರಣ